# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026




Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 259 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 20.04.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 259 • PRGI No:KARKAN/2023/88055 • VIJAYANAGARA • 20.04.2025 • Sunday • Page:04 • Rs:2


# ಹೊಸಹಳ್ಳಿಗೆ ಹೊಸಸ್ಪರ್ಶ ನೀಡಲು ಸಿದ್ಧ

## ಶಾಸಕ ಎನ್.ಟಿ.ಶ್ರೀನಿವಾಸ ಹೇಳಿಕೆ | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಅನುದಾನ.. ಕ್ಷೇತ್ರಕ್ಕೆ ವರದಾನ

## ಗ್ರಾಮಕ್ಕೆ ಜಿಲ್ಲಾಡಳಿತ | ಮೂಲಭೂತ ಸೌಕರ್ಯಗಳಿಗೆ ಆದ್ಯತೆ | ಸಾರ್ವಜನಿಕರಿಂದ ಅಹವಾಲುಗಳ ಸ್ವೀಕಾರ

■ ಹಂಪಿ ಟೈಮ್ಸ್ ಕೂಡ್ಲಿಗಿ

ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಎಂದು ಕರೆಯುವ ಹೊಸಹಳ್ಳಿ ಗ್ರಾಮ ಮೂಲಭೂತ ಸೌಕರ್ಯಗಳಿಲ್ಲದೆ ಸೊರಗಿದೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹೇಳಿದರು.

ತಾಲೂಕಿನ ಹೊಸಹಳ್ಳಿ ಹೊರವಲಯದ ಗಾಣಿಗರ ಸಮುದಾಯ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಆಯೋಜಿಸಿದ ಜನಸ್ಪಂದನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೆಕೆಆರ್‌ಡಿಬಿಯ ಅನುದಾನದಿಂದ ಅನ್ವರ್ಥವಾಗುವಂತೆ ಹೊಸಹಳ್ಳಿಯನ್ನಾಗಿ ಮಾಡಲು ಸದಾ ಸಿದ್ಧ ಎಂದು ತಿಳಿಸಿದರು. ಅವೈಜ್ಞಾನಿಕವಾಗಿ ನಿರ್ಮಿಸಿರುವ ರಸ್ತೆಗಳಿಂದ ನಿತ್ಯವೂ ಪ್ರಾಣಪ್ರಾಯದಿಂದ ಯುವಕರು ಸಂಚರಿಸುವಂತಾಗಿದೆ. ಈ ಭಾಗಕ್ಕೆ 20 ಕೋಟಿ ಅನುದಾನದಿಂದ ರಸ್ತೆಗಳ ಅಗಲೀಕರಣ, ಸುಸಜ್ಜಿತ ರಸ್ತೆಗಳನ್ನು ನಿರ್ಮಿಸಲಾಗುವುದು ಎಂದರು.

ಜನಸ್ಪಂದನ ಕಾರ್ಯಕ್ರಮ ಆಯೋಜಿಸಿರುವುದರಿಂದ, ಜಿಲ್ಲಾಧಿಕಾರಿಗಳೊಂದಿಗೆ, ಜಿಲ್ಲಾಡಳಿತ, ತಾಲೂಕು ಆಡಳಿತ ನಿಮ್ಮ ಅಹವಾಲುಗಳನ್ನು ಸ್ವೀಕರಿಸುವ ಮೂಲಕ ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂದರು. ತಾಲೂಕು ಕೇಂದ್ರಗಳಿಗೆ ಆಗಮಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಬಹುದು ಎಂದು ನಿಮ್ಮ ಹೋಬಳಿಯ ಹೊಸಹಳ್ಳಿ ಗ್ರಾಮಕ್ಕೆ ಜಿಲ್ಲಾಡಳಿತ ಆಗಮಿಸಿದೆ. ಇದರಿಂದ ಅನೇಕ ಸಮಸ್ಯೆಗಳನ್ನು ಇಂದೇ ಬಗೆಹರಿಸಿಕೊಳ್ಳಲು ಅವಕಾಶವಿದೆ ಎಂದರು.

ಕ್ಷೇತ್ರದ ಕಟ್ಟಕಡೆಯ ವ್ಯಕ್ತಿಗೂ, ಸರ್ಕಾರದಿಂದ ದೊರೆಯುವ ಸೌಲಭ್ಯಗಳು ದೊರಕುವಂತಾಗಬೇಕು ಎಂಬ ಹಂಬಲದಿಂದ, ಮುಂಬರುವ ಜನಸ್ಪಂದನ ಕಾರ್ಯಕ್ರಮವನ್ನು ಗುಡೇಕೋಟೆ, ಕೂಡ್ಲಿಗಿ, ಉಜ್ಜಿನಿ ಮುಂತಾದ ಕಡೆ ಆಯೋಜಿಸುವ ಮೂಲಕ ಜನರಿಗೆ ಸ್ಪಂದಿಸುವ ಕಾರ್ಯವನ್ನು ನೆರವೇರಿಸಲಾಗುವುದು. ಅತ್ಯಂತ ನಿರೀಕ್ಷೆಯನ್ನು ಇಟ್ಟುಕೊಂಡು ಬಹುಮತಗಳೊಂದಿಗೆ ಚುನಾಯಿಸಿದ್ದೀರಿ, ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಇದಕ್ಕೆ ನಿಮ್ಮಿಂದ ತಾಳ್ಮೆ, ಸಹಕಾರವನ್ನು ಮಾತ್ರ ಕೋರುತ್ತೇನೆ. ಹಂತ, ಹಂತವಾಗಿ ಕ್ಷೇತ್ರಷ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲಾಗುವುದು.



ಕೆರೆ ನೀರು ತುಂಬಿಸುವ ಯೋಜನೆ ಅತ್ಯಂತ ಶೀಘ್ರದಲ್ಲಿ ಮೇ ತಿಂಗಳಿನ ಅಂತ್ಯದಲ್ಲಿ ಅಥವಾ ಜೂನ್ ಮೊದಲ ವಾರದಲ್ಲಿ ಉದ್ಘಾಟಿಸಲು ಮುಖ್ಯಮಂತ್ರಿಗಳೊಂದಿಗೆ ಮಾತುಕತೆಯನ್ನು ನಡೆಸಿದ್ದೇನೆ. ಇದರಿಂದ ಕೆರೆ, ಕುಂಟೆ, ಹಳ್ಳ, ಕೊಳ್ಳಗಳು ನೀರು ತುಂಬಿಸಲು ಅನುಕೂಲವಾಗುತ್ತದೆ. ಕ್ಷೇತ್ರದ ಅಭಿವೃದ್ಧಿ ನನ್ನ ಕನಸು ನಾನು ಹಗಲಿರಳನ್ನೆದೆ ಶ್ರಮವಹಿಸಿ ಕಾರ್ಯಪ್ರವೃತ್ತನಾಗಿದ್ದೇನೆ. ಈಗಾಗಲೇ ಶಿಕ್ಷಣ ಕ್ಷೇತ್ರಕ್ಕೆ ಆಧ್ಯತೆ ನೀಡಲು ನೂತನ ಕಟ್ಟಡಗಳನ್ನು, ಅಡುಗೆ ಕೋಣೆಗಳನ್ನು, ಅಂಗನವಾಡಿ ಕಟ್ಟಡಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಅದರಂತೆ, ರಸ್ತೆಗಳ ಅಭಿವೃದ್ಧಿಗಾಗಿ ಬರೋಬ್ಬರಿ 50 ಕೋಟಿ ಅನುದಾನದಿಂದ ಭೂಮಿ ಪೂಜೆಯನ್ನು ನೆರವೇರಿಸಲಾಗಿದೆ. ಬೇಸಿಗೆಯ ಸಮಯವಾದ್ದರಿಂದ, ಕೂಡಲೇ ಕಾಮಗಾರಿ ನಡೆಯುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

### ಸ್ಮಶಾನ ಭೂಮಿ ಒತ್ತುವರಿದಾರರಿಗೆ ಕಾದಿದೆ ಕ್ರಮ

ಸರ್ಕಾರದ ಜಮೀನುಗಳ ಒತ್ತುವರಿಯಾದ ಬಗ್ಗೆ ಹಲವಾರು ಗ್ರಾಮಗಳಿಂದ ದೂರುಗಳು ಬಂದಿವೆ. ಅದರಲ್ಲಿ ಸ್ಮಶಾನಕ್ಕೆ ಸಂಬಂಧಿಸಿದ ಜಾಗವನ್ನು ಒತ್ತುವರಿ ಮಾಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಇಂಥವರ ಮೇಲೆ ಸೂಕ್ತ ರೀತಿಯ ಕ್ರಮ ಜರುಗಿಸಲಾಗುವುದು ಎಂದು ಡಿಸಿ ಎಂ.ಎಸ್.ದಿವಾಕರ ಹೇಳಿದರು.

ಶಾಸಕ ಡಾ.ಎನ್.ಟಿ. ಶ್ರೀನಿವಾಸ ಹಳ್ಳಿಗಳಲ್ಲಿ ಇಸ್ಪೀಟು, ಜೂಜಾಟ, ಇತ್ಯಾದಿ ಅಕ್ರಮವಾಗಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ ಎಂದು ವರದಿಯಾಗಿದೆ. ಇದನ್ನು ಮಟ್ಟಹಾಕುವಂತೆ ಪೊಲೀಸ್ ಇಲಾಖೆಗೆ ತಿಳಿಸಿದರು.

**ಸಾರ್ವಜನಿಕರ ಅಹವಾಲುಗಳು:** ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಸಮಸ್ಯೆಗಳು ಸರ್ಕಾರ ನಿಯಮಗಳ ಚೌಕಟ್ಟಿನಲ್ಲಿದ್ದರೆ, ಸ್ಥಳದಲ್ಲಿಯೇ ವಿಲೇವಾರಿಮಾಡಲಾಗುವುದು. ಅಲ್ಪ ಸಮಸ್ಯೆಗಳಿದ್ದರೆ, ಕೆಲವು ದಿನಗಳಲ್ಲಿ ಬಗೆಹರಿಸುತ್ತೇವೆ. ಕಂದಾಯ ಇಲಾಖೆಗೆ ಸಂಬಂಧಪಟ್ಟ ಅರ್ಜಿಗಳು: 297 ಸ್ವೀಕೃತಿಯಾಗಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ: 26ಅರ್ಜಿಗಳು ಸ್ವೀಕೃತಿಯಾಗಿವೆ. ಆರೋಗ್ಯ ಇಲಾಖೆಗೆ ಅರ್ಜಿಗಳು :21 ಅರ್ಜಿಗಳು ಬಂದಿವೆ ಉಳಿದಂತೆ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಪರಿಹಾರವನ್ನು ಒದಗಿಸಲಾಗುವುದು ಎಂದು ತಿಳಿಸಿದರು.

## ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕೆ ಎಸ್ಸಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2025–26ನೇ ಸಾಲಿಗೆ ಪರಿಶಿಷ್ಟ ಪಂಗಡದ (ಎಸ್ಸಿ) ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆಯ ಮೂಲಕ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ರವಿಕುಮಾರ್ ತಿಳಿಸಿದ್ದಾರೆ.

ಪ್ರವೇಶ ಬಯಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ಏ.19 ರಿಂದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ.3 ರಂದು ಕೊನೆಯ ದಿನವಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಮೂಲ ದಾಖಲಾತಿಗಳೊಂದಿಗೆ ಕಚೇರಿಯ ವೇಳೆಯಲ್ಲಿ ಆಯಾ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಕಚೇರಿಗಳಲ್ಲಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60 ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಒಳಗಿರಬೇಕು. ಹೆಚ್ಚಿನ ಮಾಹಿತಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹೊಸಪೇಟೆ ಮೊ.9742423530, ಕೂಡ್ಲಿಗಿ ಮೊ.7022223200, ಹರಪನಹಳ್ಳಿ ಮೊ.7899465098, ಹಡಗಲಿ ಮೊ.9901980762, ಹಗರಿ ಬೊಮ್ಮನಹಳ್ಳಿ ಮೊ.9901980762 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆದ್ದಾರಿಯಲ್ಲಿ ಟೈಯರ್ ಬ್ಲಾಸ್ಟ್ ಸುಟ್ಟು ಭಸ್ಮವಾದ ಲಾರಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಶೇಂಗಾ ಹಿಂಡಿ ತುಂಬಿದ ಲಾರಿಯೊಂದು ಏಕಾಏಕಿ ಪಲ್ಟಿಯಾಗಿ ಬೆಂಕಿ ಹತ್ತಿಕೊಂಡು ಸಂಪೂರ್ಣ ಸುಟ್ಟುಹೋದ ಘಟನೆ ತಾಲೂಕಿನ ಶಿವಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಶನಿವಾರ ಬೆಳಿಗ್ಗೆ ನಡೆದಿದೆ.

ಬಾಗಲಕೋಟೆ ಯಿಂದ ಬೆಂಗಳೂರು ಕಡೆಗೆ ಶೇಂಗಾ ಹಿಂಡಿ ತುಂಬಿದ್ದ ಲಾರಿ ಶನಿವಾರ ಬೆಳಿಗ್ಗೆ ತಾಲೂಕಿನ ಶಿವಪುರ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಸಂಚರಿಸುತ್ತಿರುವಾಗ ಹಠಾತ್ತನೆ ಪಲ್ಟಿಯಾಗಿ ಲಾರಿ ಸಮೇತ ಸರಕು ಕೂಡ ಬೆಂಕಿ ಹತ್ತಿಕೊಂಡು ಧಗಧಗನೆ ಉರಿಯಲು ಪ್ರಾರಂಭಿಸಿದೆ. ಲಾರಿ ಡ್ರೈವರ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ವಿಷಯ ತಿಳಿದ ಕೂಡ್ಲಿಗಿ ಅಗ್ನಿಶಾಮಕ ದಳ ಠಾಣಾಧಿಕಾರಿ ಶರಣಬಸವ ರೆಡ್ಡಿ ಹಾಗೂ ಸಿಬ್ಬಂದಿಯವರು ಬೆಂಕಿಯನ್ನು ನಂದಿಸಿದ್ದಾರೆ. ಕೂಡ್ಲಿಗಿ ಠಾಣೆ ಪಿಎಸ್ಐ ಪ್ರಕಾಶ್ .ಸಿ ಸ್ಥಳದಲ್ಲಿನ ಸಂಚಾರಿ ವ್ಯವಸ್ಥೆ ಒನ್ ವೇ ಮೂಲಕ ಸಂಚಾರಿಸುವಂತೆ ಕ್ರಮ ಕೈಗೊಂಡ ಸಂಚಾರ ಸುಗಮಗೊಳಿಸಿದರು.

### ನಿನಗೆ ನೀನೇ ಬೆಳಕು

ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕು,
ಬರಿಯ ಚೀಲಗಳಾಗಬಾರದು.
– ಕುವೆಂಪು

### ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


REQUIRED
Are you passionate about creativity, branding and making ideas come alive?
We're looking for dynamic individuals to join our Advertising & Marketing Team!
POSITION
- Advertising Manager
- Ad Sales Executive

LOCATION
Vijayanagara Dist.
Who can Apply:
- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :
96866 63125



### ಮೈಕ್ರೋ ನ್ಯೂಸ್

## ಅರ್‌ಟಿಓ ಕಚೇರಿಯಲ್ಲಿ 24ಫಿ7 ಸಹಾಯವಾಣಿ ಸೇವೆ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಲಾರಿ ಮಾಲೀಕರು ಹಾಗೂ ವಿವಿಧ ಸಂಘಗಳು ಏ.14 ರಿಂದ ಅನಿರ್ಧಿಷ್ಟ ಮುಷ್ಕರಕ್ಕೆ ಕರೆ ನೀಡಿದ್ದು, ಮುಷ್ಕರದ ಅವಧಿಯಲ್ಲಿ ಸಾರ್ವಜನಿಕರಿಗೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ 24ಫಿ7 ಕಾರ್ಯನಿರತದಲ್ಲಿರುತ್ತದೆ. ಅಗತ್ಯ ಸೇವೆಗಳ ಪೂರೈಕೆಯಲ್ಲಿ ತೊಂದರೆ ಉಂಟಾದರೆ ಕಂಟ್ರೋಲ್ ರೂಂ ಸಹಾಯವಾಣಿ ಸಂಖ್ಯೆ 08394 230766 ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ ಈಶ್ವರ ಚವ್ಹಾಣ್ ತಿಳಿಸಿದ್ದಾರೆ.

### ಆನಂದ ಬಾಣ





ಚಿಕ್ಕದೊಂದು ಜಾಹೀರಾತು ನಿಮ್ಮ ವ್ಯಾಪಾರವನ್ನು ವೃದ್ಧಿಸಬಲ್ಲದು..!
ಜಾಹೀರಾತಿಗಾಗಿ ಸಂಪರ್ಕಿಸಿ
ಮೊ: 9448633038



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
ಸಮಸ್ತ ಓದುಗರಿಗೆ ಧನ್ಯವಾದಗಳು
THANK YOU
1,70,000+
E-PAPER USER ENGAGEMENT
16,00,000+
EVENT COUNT
PRINT & DIGITAL NEWS PAPER IN VIJAYANAGARA
CALL US FOR PRINT & DIGITAL ADS
www.hampitimes.com / https://epaper.hampitimes.com
Email: hampitimes@gmail.com
94486 33038
@hampitimes @hampitmes
# Near Valmiki Circle, Hosapete-583201 Vijayanagara Dist.
Scan to Read
HAMPI TIMES TEAM

## ಬೆಳಕಿನ ಹಾದಿ

# ತಾಳ ತಪ್ಪಿದ ಗಟ್ಟಿಮೇಳ

■ ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟಿ.



ಲೈಂಗಿಕ ಸುಖದ ಜೊತೆಗೆ ತನ್ನ ಸಂತಾನವನ್ನು ಮುಂದುವರಿಸಬೇಕೆಂಬ ಉತ್ಕಟೇಚ್ಛೆ ಪ್ರತಿಯೊಂದು ಜೀವಿಗಳಲ್ಲಿರುತ್ತದೆ. ಇದಕ್ಕೆ ಮಾನವನು ಹೊರತಾಗಿಲ್ಲ. ಕಾನೂನಿನ ಪ್ರಕಾರ ಹೆಣ್ಣಿಗೆ 18, ಗಂಡಿಗೆ 21 ವರ್ಷಗಳು ಮದುವೆಗೆ ಕನಿಷ್ಠ ವಯಸ್ಸು. ಸೂಕ್ತ ವಯಸ್ಸಿನಲ್ಲಿ ವಿವಾಹವಾದರೆ ಮುಪ್ಪಾಗುವ ಮುನ್ನ ಮಕ್ಕಳ ಪಾಲನೆ ಪೋಷಣೆಯನ್ನ ಮಾಡಬಹುದು, ಅವರ ಸಾಧನೆಗಳನ್ನು ಕಣ್ತುಂಬಿಕೊಳ್ಳಬಹುದು. ಜೀವನ ಸಾರ್ಥಕ ಮಾಡಿ ಕೊಳ್ಳಬಹುದು ಎಂಬುದು ಹಲವರ ಅಭಿಪ್ರಾಯ. ಆದರೆ ಪ್ರಸ್ತುತ ಕಾಲಮಾನದಲ್ಲಿ ಹೆಚ್ಚಿನ ಅಧ್ಯಯನ, ಉದ್ಯೋಗ, ಗಳಿಕೆ ಮೊದಲಾದ ಕಾರಣಗಳಿಂದ ಸಾಕಷ್ಟು ಯುವಕ–ಯುವತಿಯರು ತಮ್ಮ ವಿವಾಹವನ್ನು ಮುಂದೂಡುತ್ತಿದ್ದಾರೆ. ಹಾಗೆಯೇ ತಮ್ಮ ವಿದ್ಯಾಭ್ಯಾಸಕ್ಕೆ ಸರಿ ಹೊಂದುವ, ತಮ್ಮ ಸ್ಥಾನ ಮಾನಕ್ಕೆ, ಅಂತಸ್ತಿಗೆ ತಕ್ಕುದಾದ ಸಂಗಾತಿಯನ್ನು ಆರಿಸಿಕೊಳ್ಳಬೇಕೆಂಬ ಅತೀ ಸುರಕ್ಷತಾ ಭಾವ ಎಷ್ಟೋ ಜನರ ಲೇಟ್ ಮ್ಯಾರೇಜ್‌ಗೆ ಕಾರಣವಾಗಿದೆ. ಜೀವನದಲ್ಲಿ ಏನನ್ನಾದರೂ ಮಹತ್ತನ್ನು ಸಾಧಿಸಿದ ಮೇಲೆಯೇ ವಿವಾಹವಾಗ ಬೇಕೆಂಬ ಭಾವನೆ ಒಂದರ್ಥದಲ್ಲಿ ಒಳ್ಳೆಯದಾದರೂ, ವಿವಾಹವಾದ ಮೇಲೆ ಸಾಧನೆ ಮಾಡಲಾಗಲ್ಲ ಎಂಬ ನಕಾರಾತ್ಮಕ ಭಾವ ಏಕೆ? ಸಾಧಿಸುವ ಛಲವಿರುವವರಿಗೆ ವಿವಾಹ ಬಂಧನ ಸಾಧನೆಗೆ ಅಡ್ಡಿಯಾಗದು. ಈ ನಿಟ್ಟಿನಲ್ಲಿ ಇಂದಿನ ಯುವ ಪೀಳಿಗೆ ಯೋಚಿಸಬೇಕಿದೆ.



ಭ್ರೂಣಲಿಂಗ ಪತ್ತೆ ಯಂತ್ರದ ಆವಿಷ್ಕಾರವು ಲಿಂಗ ಸಮಾನುಪಾತಕ್ಕೆ ಕೊಡಲಿ ಪೆಟ್ಟು ನೀಡಿದ ಪ್ರಮುಖ ಕಾರಣಗಳಲ್ಲಿ ಒಂದು. ಗಂಡು ಸಂತಾನವೇ ಶ್ರೇಷ್ಠ ಎಂಬ ಸಂಕುಚಿತದ ಮನಗಳು ಕಳ್ಳ ಮಾರ್ಗದ ಮೂಲಕ ಹೆಣ್ಣು ಭ್ರೂಣಲಿಂಗ ಪತ್ತೆ ಮಾಡಿ ಅದನ್ನು ಹತ್ಯೆ ಮಾಡುವ ಮೂಲಕ ನೀಚತನಕ್ಕಿಳಿದದ್ದು ಇಂದಿನ ನಮ್ಮ ಹುಡುಗನಿಗೆ ಹುಡುಗಿಯೇ ಸಿಗುತ್ತಿಲ್ಲ ಎಂಬ ಗೊಣಗುವಿಕೆಗೆ ಕಾರಣಗಳಲ್ಲಿ ಒಂದು ಎಂದರೆ ತಪ್ಪಾಗದು. ಇಂದಿನ ಕಾನೂನು ಬಿಗಿಯಾಗಿರುವುದರಿಂದ ಇದಕ್ಕೆ ತಡೆಯಾಗಿರುವುದು ಮುಂದೊಂದು ದಿನ ಲಿಂಗ ಸಮಾನತೆಗೆ ಕಾರಣವಾಗಬಲ್ಲದು. ಆಗ ಈ ಸಮಸ್ಯೆ ಬಗೆ ಹರಿದರೆ ಅದಕ್ಕಿಂತ ಸಮಾಧಾನದ ವಿಷಯ ಮತ್ತೇನಿದೆ? ಹಾಗೆಯೇ ವರದಕ್ಷಿಣೆ ಎಂಬ ಮಹಾಮಾರಿ ಹಲವು ಮುಗ್ಧ ಹೆಣ್ಣು ಮಕ್ಕಳ ಜೀವಕ್ಕೆ ಕುತ್ತಾದ ಉದಾಹರಣೆಗಳು ಕಣ್ಮುಂದಿವೆ.

ವಿವಾಹವೆಂಬುದು 'ಏಳೇಳು ಜನ್ಮದ ಬಂಧ' ಎಂಬ ಪರಿಕಲ್ಪನೆ ಕೆಲವರಲ್ಲಿ ಮರೆಯಾಗಿ ಕೆಲವೊಮ್ಮೆ ಕ್ಷುಲ್ಲಕ ಕಾರಣಗಳಿಗೆ, ಪ್ರತಿಷ್ಠೆಯ ಕಾರಣಗಳಿಗೆ ವಿಚ್ಛೇದನ ತೆಗೆದುಕೊಳ್ಳುತ್ತಿರುವುದು ಗಟ್ಟಿಮೇಳ ತಾಳ ತಪ್ಪಲು ಕಾರಣವಾಗಿದೆ. ಜೀವನವೆಂಬುದು ಸಿದ್ಧ ಮಾದರಿಯಲ್ಲ. ಸಿದ್ಧಿಸಿಕೊಳ್ಳಬೇಕಾದ ದಾರಿ. ಈ ನಿಟ್ಟಿನಲ್ಲಿ ಸಣ್ಣಪುಟ್ಟ ತಪ್ಪುಗಳನ್ನೇ ದೊಡ್ಡದು ಮಾಡಿಕೊಳ್ಳದೆ ತಿದ್ದಿಕೊಂಡು ಮುಂದಡಿ ಇಟ್ಟಾಗ ಬಾಳು ಬಂಗಾರವಾಗುತ್ತದೆ. ಹಾಗಂತ ಹಿಂಸೆಯನ್ನೆಲ್ಲಾ ಸಹಿಸಿಕೊಂಡು ಜೊತೆ ಇರಬೇಕು ಎಂದಲ್ಲ. ಪರಸ್ಪರ ಒಬ್ಬರನ್ನೊಬ್ಬರು ಅರ್ಥೈಸಿಕೊಳ್ಳಬೇಕು. ಶರಣರು ಹೇಳುವ ಹಾಗೆ 'ಸತಿಪತಿಗಳೊಂದಾದ ಬಕುತಿ ಶಿವಂಗೂ ಹಿತವಪ್ಪುದು'. ಹೀಗಿರುವ ಮನೆ ನಂದನವನವಾಗುತ್ತದೆ.ಮನವೇ ಮಂದಿರವಾಗುತ್ತದೆ. ಬಾಳು ನೆಮ್ಮದಿಯ ಗೂಡಾಗುತ್ತದೆ.

# ತುಟಿ ಅಂಚಿನ ಮಾತು...!

ನೀವು ಬಿಡಿ, ನಿಮ್ಮದು ಅಲ್ಲೇ ಡ್ರಾ ಅಲ್ಲೇ ಬಹುಮಾನ. ನಮಗೆಲ್ಲ ಅದು ಸಾಧ್ಯವಾಗದ ಮಾತು. ಹಾಗೆಲ್ಲ ಮುಖದ ಮೇಲೆ ಹೊಡೆದ ಹಾಗೆ ಹೇಳಿಬಿಡುತ್ತೀರಲ್ಲ, ಅವರಿಗೇನಾದರೂ ನಿಮ್ಮ ಮಾತಿನಿಂದ ಬೇಸರವಾದರೆ, ಅವರು ನಿಮ್ಮ ಬಗ್ಗೆ ಏನಾದರು ಅಂದುಕೊಳ್ಳುವ ಸಂಕೋಚ, ಅವರ ಬಗ್ಗೆ ಸ್ವಲ್ಪವೂ ನಿಮಗೆ ಭಯವಿಲ್ಲವಾ? ಬಹು ಮುಖ್ಯವಾಗಿ ನೀವು ಪದೇ ಪದೇ ಈ ರೀತಿ ಮಾತನಾಡುವುದರಿಂದ ಕೆಲ ಒಳ್ಳೆಯ ಮಿತ್ರರನ್ನು ಕಳೆದುಕೊಳ್ಳುವುದಿಲ್ಲವೆ..? ಎಂದು ಕೇಳುವ ಅನೇಕ ಸ್ನೇಹಿತರನ್ನು ಕಂಡಾಗ ಕನಿಕರವೆನಿಸುತ್ತದೆ.

ನೀವು ಬಿಡಿ ಮೇಡಂ ಯಾವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಏನು ಹೇಳಬೇಕು ಅಂದುಕೊಂಡಿರಿತ್ತೀರೊ ಅದನ್ನು ತಕ್ಷಣಕ್ಕೆ ಹೇಳಿ ನೀರಾಳವಾಗಿಬಿಡುತ್ತೀರಿ, ನಮ್ಮಿಂದ ಅದು ಸಾಧ್ಯವಿಲ್ಲ. ನಮಗೂ ನಿಮ್ಮ ತರಹ ಹೇಳಬೇಕು ಅನಿಸಿದರೂ ಅದೇನೋ ಗೊತ್ತಿಲ್ಲ, ಆ ಸಮಯಕ್ಕೆ ಅದೇಕೋ ನಾಲಿಗೆಯ ತುದಿಗೆ ಬಂದ ಮಾತು ಅಲ್ಲೇ ಇಂಗಿ ಹೋಗಿಬಿಡುತ್ತದೆ.

ಹೀಗೆ ಕೇಳುವ ಅನೇಕ ಜನರನ್ನು ನಾವು ನಮ್ಮ ನಿತ್ಯ ಆಗುಹೋಗುಗಳಲ್ಲಿ ಕಾಣುತ್ತೇವೆ, ಕೆಲವು ಬಾರಿ ತೀರಾತೀರ ನಮ್ಮ ಹತ್ತಿರದವರಲ್ಲೇ ಇಂತಹ ಗುಣಗಳನ್ನು ನೋಡಿರುತ್ತೇವೆ. ಮುಂದುವರಿದು ನಾವೇ ಕೆಲವು ಪುಕ್ಸಟ್ಟೆ ಸಲಹೆಗಳನ್ನು ಇಂತವರಿಗೆ ನೀಡಿರುತ್ತೇವೆ. ಕೆಲವು ಸಮಯ ಸಂದರ್ಭಗಳಲ್ಲಿ ನಮಗರಿವಿಲ್ಲದಂತೆ ನಾವೂ ಇಂತವರಲ್ಲಿ ಒಬ್ಬರಾಗಿ ಬಿಟ್ಟುರುತ್ತೇವೆ.

ಇದಕ್ಕೆ ಕಾರಣ ಹುಡುಕುತ್ತಾ ಹೋದರೆ ಕಂಡುಬರುವ ಅಂಶವೇ "ನಾಚಿಕೆ" ಈ ನಾಚಿಕೆಗೆ ಮೂಲ ಕಾರಣ ಅವರ "ಅರಿವು". ಒಂದು ವೇಳೆ ನೀವು ಹೆಚ್ಚು ಹೆಚ್ಚು ನಿಮ್ಮ ಬಗ್ಗೆ ಸ್ವಯಂ ಅರಿವುಳ್ಳವರಾಗಿದ್ದರೆ ಈ ನಾಚಿಕೆಯನ್ನು ದೂರಮಾಡ 'ಬಹುದು. ಆದರೆ ನೆನಪಿರಲಿ ನಿಮ್ಮಲ್ಲಿ ನಾಚಿಕೆ ಸ್ವಾಬಾವವಿದೆ ಎನ್ನುವು ದಾದರೆ, ನೀವು ಹೆಚ್ಚು ಹೆಚ್ಚು ನಿಮ್ಮ ನ್ಯೂನತೆಗಳನ್ನು ಮತ್ತು ನಿಮ್ಮಲ್ಲಿನ ಅಪೂರ್ಣತೆ ಗಳನ್ನು ಗುರುತಿಸುತ್ತಿದ್ದೀರಿ ಎಂದೇ ಅರ್ಥ. ಆದ್ದರಿಂದ ನೀವು ನಾಚಿಕೆಪಡುತ್ತೀರಿ ಎಂದರೆ ಅದು ಕಾಯಿಲೆಯಲ್ಲ ಬದಲಾಗಿ ಪರಿಪೂರ್ಣತೆಗೆ ನಿಮ್ಮಲ್ಲಿ ಅವಕಾಶವಿದೆ ಎನ್ನುವುದರ ಲಕ್ಷಣ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper



ಹಾಗಂತ ನಾಚಿಕೆ ಮಿತವಾಗಿದ್ದರೆ ಹಿತಕರ, ಮಿತಿಮೀರಿದರೆ ಅದು ಅಹಿತಕರವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ನಮ್ಮಲ್ಲಿನ ನಾಚಿಕೆಯ ಸ್ವಾಬಾವ ನಮ್ಮ ನ್ಯುನತೆಯಾಗಬಾರದು. ಅದು ನಮ್ಮ ಆತ್ಮವಿಶ್ವಾಸವನ್ನು ಕಡಿಮೆ ಮಾಡಬಾರದು, ನಮ್ಮಲ್ಲಿ ಹಿಂಜರಿಕೆ ಯನ್ನುಂಟು ಮಾಡಿ ನಮ್ಮ ಸ್ವಾಭಿಮಾನಕ್ಕೆ ದಕ್ಕೆಯನ್ನುಂಟು ಮಾಡು ವಂತಾಗಬಾರದಲ್ಲವೆ. ಮುಂದುವರಿದ ಈ ನಮ್ಮ ಗುಣ ನಮ್ಮ ಸಾಮಾಜಿಕ ಜೀವನಕ್ಕೆ ಅಡ್ಡಿಯಾಗಬಾರದಲ್ಲವೆ?. ಹಾಗಾಗಿ ಅಂದರೆ ನಿಮ್ಮಲ್ಲಿರುವ ನಾಚಿಕೆಯ ಈ ಸ್ವಬಾವ ನಿಮ್ಮ ಅಪೂರ್ಣತೆಗಳನ್ನು ಗುರುತಿಸಲು ಒಂದು ಹಂತಕ್ಕೆ ಸಾಕಾಗಬಹುದು ಆದರೆ ನಿಜವಾಗಿಯೂ ನಿಮ್ಮ ಅಪೂರ್ಣತೆಯನ್ನು ಗುರುತಿಸಲು ನಿಮ್ಮಲ್ಲಿ ಸಾಕಷ್ಟು ಗ್ರಹಿಕೆ, ಸೃಜನಶೀಲತೆ ಮತ್ತು ನಿಮ್ಮದೇ ಸ್ವಂತ ಬುದ್ಧಿವಂತಿಕೆ ಬೇಕಾಗುತ್ತದೆ. ಈ ಅರ್ಥದಲ್ಲಿ ನಿಮ್ಮಲ್ಲಿ ನಾಚಿಕೆ ಇರುವುದು ಒಂದು ಹಂತಕ್ಕೆ ಒಳ್ಳೆಯದೇನು ಎಂದುಕೊಳ್ಳಬಹುದು.

ಈ ನಾಚಿಕೆ, ಸಂಕೋಚವು ನಮ್ಮಲ್ಲಿ ಉಂಟಾಗಲು ಮೂಲ ಕಾರಣಗಳನ್ನು ಪತ್ತೆಹಚ್ಚುವುದಾದರೆ ಅದರ ಮೂಲ ಸ್ವರೂಪವನ್ನು ಅರ್ಥೈಸಿಕೊಳ್ಳಬೇಕು. ಒಂದು ಸಂಶೋಧನೆಯ ಪ್ರಕಾರ ಸಂಕೋಚವು ಒಂದು ಸಂಕೀರ್ಣ ಲಕ್ಷಣವಾಗಿದ್ದು, ಇದು ನಮ್ಮಲ್ಲಿ ಕೆಲವರಿಗೆ ಆನುವಂಶಿಕವಾಗಿ, ಕೆಲವರಲ್ಲಿ ಅವರಿರುವ ಪರಿಸರದ ಕಾರಣದಿಂದಾಗಿ ಮತ್ತು ಕೆಲವರಲ್ಲಿ ಅವರ ಮಾನಸಿಕ ಅಂಶಗಳ ಸಂಯೋಜನೆಯಿಂದ ಪ್ರಭಾವಿತವಾಗಿರುತ್ತದೆ ಎಂಬುದು ಕಂಡುಬರುತ್ತದೆ. ಈ ನಾಚಿಕೆ, ಸಂಕೋಚವು ನಮ್ಮಲ್ಲಿ ಉಂಟಾಗಲು ಮೂಲ ಮುಖ್ಯ ಕಾರಣಗಳು ಈ ಕೆಳಗಿನಂತಿವೆ:

**1. ಆನುವಂಶಿಕ ಅಂಶಗಳ ಪ್ರಕಾರ.**

ಇಲ್ಲಿಯವರೆಗೆ ನಡೆದಂತಹ ಸಂಶೋಧನೆಗಳು ಈ ಸಂಕೋಚವು ಕೆಲವು ಸಂದರ್ಭಗಳಲ್ಲಿ ಆನುವಂಶಿಕ ಅಂಶವನ್ನು ಹೊಂದಿರಬಹುದು ಎಂದು ಸೂಚಿಸುತ್ತದೆ. ಕೆಲವು ಅಧ್ಯಯನಗಳು ಸಂಕೋಚಕ್ಕೆ ಸಂಬಂಧಿಸಿದ ಗುಣಲಕ್ಷಣಗಳಾದ ಸಾಮಾಜಿಕ ಆತಂಕವನ್ನು ಕೆಲವು ಸಂದರ್ಭಗಳಲ್ಲಿ ಆನುವಂಶಿಕವಾಗಿ ಪಡೆಯಬಹುದು ಎಂದು ತೋರಿಸಿವೆ.

**2. ಪರಿಸರಾತ್ಮಕ ಕಾರಣಗಳು.**

ಪ್ರಸಿದ್ಧ ವಿಜ್ಞಾನಿ ಡಾರ್ವಿನ್ನನ ಪ್ರಕಾರ ಉಳುವಿಗಾಗಿ ಹೋರಾಟ ಮತ್ತು ಸೂಕ್ತವಾದ್ದದ್ದು ಬದುಕುಳಿಯುವ ಸಾದ್ಯತೆಗಳನ್ನು ನೋಡಿದಾಗ, ಪರಿಸರಾತ್ಮಕ ಅಂಶಗಳೂ ಸಹ ಈ ಸಂಕೋಚವು ಒಂದು ರಕ್ಷಣಾತ್ಮಕ ಕಾರ್ಯವಿಧಾನವಾಗಿರಬಹುದು ಎನ್ನುವುದನ್ನು ಒತ್ತಿ ಹೇಳುತ್ತದೆ. ನಾವು ಕಾಣುವಂತೆ ಕೆಲವು ಪ್ರಭೇದದ ಜೀವಿಗಳ ಪರಿಸರದಲ್ಲಿ, ಈ ರೀತಿಯ ಸಂಕೋಚವು ಅವುಗಳ ಸಾಮಾಜಿಕ ಸಂವಹನಗಳಲ್ಲಿ ಮತ್ತು ಪ್ರತಿಕ್ರಿಯೆಯಲ್ಲಿ ಜಾಗರೂಕರಾಗಿರುವುದು, ಸಂಭವನೀಯಾ ಸಂಘರ್ಷದ ಅಪಾಯವನ್ನು ಕಡಿಮೆ ಮಾಡುವ ಮತ್ತು ಬದುಕುಳಿಯುವಿಕೆಯನ್ನು ಹೆಚ್ಚಿಸುವ ಸಾಧ್ಯತೆಯನ್ನು ಖಾತ್ರಿಪಡಿಸಿಕೊಳ್ಳುವಲ್ಲಿ ಪರಿಸರಾತ್ಮಕ ಕಾರಣಗಳು ತಮ್ಮ ಪ್ರಭಾವವನ್ನು ಬೀರಿರಬಹುದು.

**3. ಮಾನಸಿಕ ಅಂಶಗಳು.**

ಇಲ್ಲಿ ಒಬ್ಬ ವ್ಯಕ್ತಿಯ ಅರಿವು, ಜ್ಞಾನ, ತಿಳುವಳಿಕೆಗಳು ಮತ್ತು ಪೋಷಣೆಯ ಶೈಲಿಗಳು ನಮ್ಮಲ್ಲಿನ ಈ ನಾಚಿಕೆಯ ಸ್ವಾಭಾವದ ಮೇಲೆ ಖಂಡಿತವಾಗಿ ತಮ್ಮ ಪ್ರಭವವನ್ನು ಬೀರುತ್ತವೆ. ವ್ಯಕ್ತಿಯ ಮನೋಧರ್ಮ, ಸಾಮಾಜಿಕ ಅನುಭವಗಳು ಮತ್ತು ಅವನ ಸಾಂಸ್ಕೃತಿಕ ನಡವಳಿಕೆಗಳು ಅವನು ತೆರೆದುಕೊಳ್ಳುವ ರೀತಿ ನಾಚಿಕೆಯ ಸ್ವಾಭಾವದ ಮೇಲೆ ಖಂಡಿತವಾಗಿ ತಮ್ಮ ಪ್ರಭವವನ್ನು ಬೀರುತ್ತವೆ.

ಸಮಾಜದಲ್ಲಿ ವ್ಯಕ್ತಿಯೋರ್ವನಿಗೆ ನೀಡುವ ಬೆಂಬಲ ಮತ್ತು ಪ್ರೋತ್ಸಾಹದ ವಾತಾವರಣವು ಮಹತ್ತರವಾದ ಪ್ರಭವವನ್ನು ಬೀರಿ ಆತ್ಮವಿಶ್ವಾಸವನ್ನು ಬೆಳೆಸಲು ಸಹಕರಿಸುತ್ತವೆ. ಹಾಗಿದ್ದ ಮೇಲೆ ಇದರಿಂದ ಹೊರಬರುವುದೂ ಸದ್ಯದ ಅವಶ್ಯಕತೆಗಳಲ್ಲಿ ಬಹುಮುಖ್ಯವಾಗಿದೆ. ಅದಕ್ಕಾಗಿ ಮಾಡಬೇಕಿರುವುದು ಇಷ್ಟೇ

ಈ ಸಂಕೋಚ, ನಾಚಿಕೆ ಎನ್ನುವುದು ಒಂದೇ ಒಂದು ಲಕ್ಷಣವಲ್ಲ ಬದಲಾಗಿ ಸಂಕೀರ್ಣವಾದ ಲಕ್ಷಣ ಅನೇಕ ಅಂಶಗಳ ಪ್ರಭಾವದ ಪರಿಣಾಮ. ಹಾಗಾಗಿ ಇದರಿಂದ ಮುಕ್ತಿ ಹೊಂದಲು ಸಂಬವನೀಯ ಕಾರಣಗಳು ಮತ್ತು ಅದರ ಮೂಲ ಸ್ವರೂಪವನ್ನು ಅರ್ಥೈಸಿಕೊಳ್ಳಬೇಕು. ಸಂಕೋಚವು ಒಂದು ಸಂಕೀರ್ಣ ಲಕ್ಷಣವಾಗಿದ್ದರಿಂದ, ಇದು ನಮ್ಮಲ್ಲಿ ಕೆಲವರಿಗೆ ಆನುವಂಶಿಕವಾಗಿ, ಕೆಲವರಲ್ಲಿ ಅವರಿರುವ ಪರಿಸರದ ಕಾರಣದಿಂದಾಗಿ ಮತ್ತು ಕೆಲವರಲ್ಲಿ ಅವರ ಮಾನಸಿಕ ಅಂಶಗಳ ಸಂಯೋಜನೆಯಿಂದ ಪ್ರಭಾವಿತವಾಗಿರುವುದರಿಂದ ಅವುಗಳ ಕಡೆಗೆ ಗಮನ ಹರಿಸಿ ಸುದಾರಿಸಿಕೊಳ್ಳಬೇಕು.

ವೈಯಕ್ತಿಕ ಅನುಭವಗಳು ಮತ್ತು ಸಾರಿಕರಿಸಿದ ಸಾರ್ವತ್ರಿಕ ಸಂಶೋಧನೆಗಳ ಪಲಿತಾಂಶದ ಆದರದಲ್ಲಿ ವಿವಿಧ ವ್ಯಕ್ತಿತ್ವದ ಲಕ್ಷಣಗಳನ್ನು ಗುರುತಿಸಿ, ಅರ್ಥೈಸಿ ಅವುಗಳನ್ನು ಸಂಸ್ಕರಿಸಿ, ಸಾರಿಕರಿಸಿ ಅನ್ವಹಿಸಿಕೊಳ್ಳುವುದರ ಮೂಲಕ ಈ ಸಂಕೋಚವನ್ನು, ನಾಚಿಕೆಯ ಸ್ವಾಬಾವವನ್ನು ದೂರಮಾಡುವುದರ ಮೂಲಕ ನಾಲಿಗೆಯ ಆ ತುದಿಗೆ ಬಂದ ಮಾತನ್ನು ನಿರ್ಭಯವಾಗಿ ಆಡವಂತಾಗಲಿ.

# ಬಸವಣ್ಣನವರ ತತ್ವ ಎಲ್ಲರೂ ಪಾಲಿಸಬೇಕು

## ಸಿಎಂ ಸಿದ್ದರಾಮಯ್ಯ ಹೇಳಿಕೆ | ಕುರುಬ ಸಮುದಾಯದ ಸಂಸ್ಕೃತಿ ದರ್ಶನ ಮಾಲೆಯ 31 ಪುಸ್ತಕಗಳನ್ನು ಲೋಕಾರ್ಪಣೆ

■ ಹಂಪಿ ಟೈಮ್ಸ್ ತುಮಕೂರು

ಹಿಂದೆ ಸಂಸ್ಕೃತ ಕಲಿಯುವವರಿಗೆ, ಶಿಕ್ಷಣ ಕಲಿಯುವ ಇತರರಿಗೆ ಕಾದ ಸೀಸದ ಶಿಕ್ಷೆ ಇತ್ತು. ಆದರೆ ನಮಗೀಗ ಶಿಕ್ಷಣ ಸಿಕ್ಕಿದೆ. ಅನುಭವಗಳನ್ನು ದಾಖಲಿಸಿ. ಪ್ರತಿಭೆ ಯಾರೊಬ್ಬರ ಸ್ವತ್ತು ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಪ್ರಜಾ ಪ್ರಗತಿ ಪತ್ರಿಕೆ, ಕುರುಬ ಸಾಂಸ್ಕೃತಿಕ ಪರಿಷತ್ ಹಾಗೂ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಕುರುಬ ಸಮಾಜದ ಸಾಂಸ್ಕೃತಿಕ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ, ಕುರುಬ ಸಮುದಾಯದ ಸಂಸ್ಕೃತಿ ದರ್ಶನ ಮಾಲೆಯ 31 ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ನಮ್ಮ ಜ್ಞಾನ ತಿಳಿವಳಿಕೆಯಲ್ಲಿ ಸ್ಪಷ್ಟತೆ ಇರಬೇಕು. ಕರ್ಮ ಸಿದ್ಧಾಂತವನ್ನು ಧಿಕ್ಕರಿಸುವ ವೈಜ್ಞಾನಿಕವಾಗಿ, ವೈಚಾರಿಕವಾಗಿ ಇರಬೇಕು. ಆಗ ಮಾತ್ರ ಗುಲಾಮಗಿರಿಯಿಂದ ಹೊರಗೆ ಬರಬಹುದು. ಸತ್ಯ ಹೇಳುವ ಚಾತಿ ಬೆಳೆಸಿಕೊಳ್ಳಬಹುದು ಎಂದರು.

ಕಾಳಿದಾಸನ ನಾಲಗೆ ಮೇಲೆ ಬ್ರಹ್ಮ ಅಕ್ಷರ ಬರೆದದ್ದಕ್ಕೆ ಮಹಾ ಸಾಹಿತಿಯಾದ ಎನ್ನುವ ಮಾತನ್ನೆಲ್ಲಾ ನಂಬಬೇಡಿ. ವಾಲ್ಮೀಕಿ ದರೋಡೆಕೋರ ಆಗಿದ್ದ ಅನ್ನುವುದನ್ನೆಲ್ಲಾ ನಂಬಬೇಡಿ. ಶೂದ್ರರು ವಿದ್ಯಾವಂತರಾಗಿ ಏನಾದರೂ ಮಹತ್ವವಾದದ್ದನ್ನು ಬರೆದರೆ ಅವರ ಬಗ್ಗೆ ಇಂಥಾ ಕತೆಗಳನ್ನು ಕಟ್ಟಿ ಬಿಡ್ತಾರೆ ಹುಷಾರು ಎಂದು ಎಚ್ಚರಿಸಿದರು.

ಬಸವಣ್ಣ 850 ವರ್ಷಗಳ ಹಿಂದೆಯೇ ಅನುಭವ ಮಂಟಪ ರಚಿಸಿ ಸಮ ಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು.




ಪ್ರಗತಿಪರ ವಿಚಾರಗಳನ್ನು ಇಟ್ಟುಕೊಂಡವರಿಗೆ ನಿರಂತರವಾಗಿ ಸಮಸ್ಯೆ ಬರುತ್ತಲೇ ಇರುತ್ತವೆ. ಹೀಗಾಗಿ ಪ್ರಗತಿಪರ ವಿಚಾರಗಳ ಜೊತೆ ನೀವು ಸದಾ ಗಟ್ಟಿಯಾಗಿ ನಿಲ್ಲಬೇಕು.

ಪ್ರಗತಿಪರ ವಿಚಾರಗಳ ಜೊತೆಗೆ ನಾವು ನಿಲ್ಲದೆ ಸಮ ಸಮಾಜ ಬರಬೇಕು ಎಂದರೆ ಸಾಧ್ಯವಿಲ್ಲ ಎಂದು ವಿವರಿಸಿದರು.

**ಮುಖ್ಯಮಂತ್ರಿಗಳ ಭಾಷಣದ ಇತರೆ ಹೈಲೈಟ್ಸ್...**

* ಜಾತಿಗೆ ಚಲನ ಇಲ್ಲ. ವರ್ಗಕ್ಕೆ ಚಲನೆ ಇಲ್ಲ. ಜಾತಿ ವ್ಯವಸ್ಥೆ ನಿಂತ ನೀರು. ಚಲನೆ ಇಲ್ಲ. ಆರ್ಥಿಕ ಚಲನೆ ಸಿಕ್ಕಾಗ ಮಾತ್ರ ಜಾತಿಯಲ್ಲೂ ಚಲನೆ ಸಿಗುತ್ತದೆ. ಈ ಚಲನೆ ಸಿಗಬೇಕಾದರೆ ಶಿಕ್ಷಣದ ಅಗತ್ಯ ಇದೆ ಎಂದರು.

* ಜಾತಿ ಮುಕ್ತ ಮಾನವೀಯ ಸಮಾಜ ನಿರ್ಮಾಣ ನಮ್ಮ ಸಂವಿಧಾನದ ಆಶಯ ಮತ್ತು ಬದ್ಧತೆ. ಆದರೆ ಇವತ್ತಿಗೂ ಅಸ್ಪೃಶ್ಯತೆ ಹೋಗಿಲ್ಲದಿರುವುದು, ಶೈಕ್ಷಣಿಕ ಸಮಾನತೆ ಇಲ್ಲದಿರುವುದು ಬೇಸರದ ಸಂಗತಿ.

* ನಾನು ಶಿಕ್ಷಣ ಪಡೆದಿರುವುದು ನನ್ನ ಸ್ವಾರ್ಥಕ್ಕೆ ಅಲ್ಲ. ಅವಕಾಶ ವಂಚಿತ ಸಮುದಾಯಗಳ ಬಿಡುಗಡೆಗಾಗಿ ವಿದ್ಯೆ ಸಂಪಾದನೆ ಮಾಡಿದ್ದೇನೆ ಎನ್ನುವ ಅಂಬೇಡ್ಕರ್ ಅವರ ಮಾತನ್ನು ಅರ್ಥ ಮಾಡಿಕೊಳ್ಳಬೇಕು.

* ಸಂವಿಧಾನ ಬರದೇ ಇದ್ದರೆ ನಾವು, ನೀವು ಶಿಕ್ಷಣ ಪಡೆಯಲು ಸಾಧ್ಯವಿರಲಿಲ್ಲ.

ಮನುಸ್ಮೃತಿ ಕಾರಣದಿಂದ ಜಾತಿ ಅಸಮಾನತೆ, ಜಾತಿ ಶೋಷಣೆ, ಜಾತಿ ದೌರ್ಜನ್ಯ ಹೆಚ್ಚಾಯಿತು

* ಪಟ್ಟಭದ್ರರು ಹಿಂದಿನ ಜನ್ಮದ ಕರ್ಮ ಎಂದು ನಂಬಿಸಿ ಜನರನ್ನು ವಂಚಿಸುತ್ತಿದ್ದಾರೆ. ಅದಕ್ಕೇ ಬಸವಣ್ಣನವರು ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದರು. ನಿಮ್ಮಲ್ಲಿ ಎಷ್ಟು ಜನ ಕರ್ಮ ಸಿದ್ಧಾಂತ ತಿರಸ್ಕರಿಸಿದ್ದೀರೋ ಗೊತ್ತಿಲ್ಲ.

* ಬ್ರಹ್ಮ ಒಬ್ಬರಿಗೆ ಶಿಕ್ಷಣ, ಮತ್ತೊಬ್ಬರಿಗೆ ಅನಕ್ಷರತೆ ಸಿಗಲಿ ಅಂತ ಬರೆದರಾ? ಒಬ್ಬನಿಗೆ ಬಡವನಾಗು, ಮತ್ತೊಬ್ಬನಿಗೆ ಶ್ರೀಮಂತನಾಗು ಅಂತ ಬ್ರಹ್ಮ ಬರೆದರಾ ? ಒಬ್ಬ ಹೊಟ್ಟೆತುಂಬ ಉಣ್ಣಬೇಕು, ಉಳಿದವರು ಹಸಿವಿನಿಂದ ಬಿದ್ದಿರಬೇಕು ಎಂದು ಬ್ರಹ್ಮ ಬರೆದುಬಿಟ್ಟರಾ ಎಂದು ಪ್ರಶ್ನಿಸಿದರು.

ಪಟ್ಟಭದ್ರರು ಬಸವಣ್ಣನವರ ಕ್ರಾಂತಿ ಮುಂದುವರೆಸಲು ಬಿಡಲಿಲ್ಲ. ಆದ್ದರಿಂದ ನಾವು ವೈಜ್ಞಾನಿಕವಾಗಿ, ವೈಚಾರಿಕವಾಗಿ ಚಿಂತಿಸುವುದು ಅಗತ್ಯ

* ಅಹಿಂದ ಸಮಾಜ ಮತ್ತು ಎಲ್ಲಾ ಜಾತಿ, ಧರ್ಮಗಳ ಬಡತನ, ಹಸಿವು ನಿವಾರಣೆ ಆಗಬೇಕು. ಅನ್ನಕ್ಕಾಗಿ ಯಾರೂ ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿ ನಿಲ್ಲಬಾರದು ಎನ್ನುವ ಕಾರಣದಿಂದ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದೆ ಎಂದು ಸ್ಮರಿಸಿದರು.

* ಕಾಯಕ, ದಾಸೋಹ ಬಸವಣ್ಣನವರ ತತ್ವ. ಇದನ್ನು ಎಲ್ಲರೂ ಪಾಲಿಸಬೇಕು ಎಂದರು.

* ಎಲ್ಲಾ ಶ್ರಮಿಕ ವರ್ಗಗಳ ಸಂಸ್ಕೃತಿ, ಆಚಾರ, ವಿಚಾರ ಹೊರಗೆ ಬರಬೇಕು. ಇದಕ್ಕಾಗಿ ಎಲ್ಲರೂ ಸಾಹಿತ್ಯ ರಚನೆಯಲ್ಲಿ ತೊಡಗೇಕು ಎಂದರು.

* ಹಿಂದೆ ಸಂಸ್ಕೃತ ಕಲಿಯುವವರಿಗೆ ಕಾದ ಸೀಸದ ಶಿಕ್ಷೆ ನಿಗಧಿಯಾಗಿತ್ತು. ಆದರೆ ಈಗ ಶಿಕ್ಷಣ ಸಿಕ್ಕಿದೆ. ನಿಮ್ಮ ನಿಮ್ಮಅನುಭವಗಳನ್ನು ದಾಖಲಿಸಿ. ಪ್ರತಿಭೆ ಯಾರೊಬ್ಬರ ಸ್ವತ್ತು ಅಲ್ಲ. ನಮ್ಮ ಜ್ಞಾನ ವೈಜ್ಞಾನಿಕವಾಗಿ, ವೈಚಾರಿಕವಾಗಿ ಇರಬೇಕು ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮೇ 14ರಿಂದ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ

■ ಹಂಪಿ ಟೈಮ್ಸ್ ರಾಯಚೂರು


ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ "ಆಂಟಿಮೈಕ್ರೊಬಿಯಲ್ ಪ್ರತಿರೋಧ ತಡೆಗಟ್ಟುವಿಕೆ ಮತ್ತು ಪರ್ಯಾಯಗಳಿಗಾಗಿ ತಂತ್ರಗಳು" ಎಂಬ ವಿಷಯದ ಕುರಿತು ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಮೇ 14ರಿಂದ ಮೇ 16ರವರೆಗೆ ಬೆಂಗಳೂರು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ.

ಈ ಸಮ್ಮೇಳನದಲ್ಲಿ ದೇಶದ ವಿವಿಧ ಪ್ರತಿಷ್ಠಿತ ಸಂಸ್ಥೆಗಳಿಂದ ಖ್ಯಾತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಜೊತೆಗೆ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಯುವ ವಿಜ್ಞಾನಿಗಳಿಗೆ ತಮ್ಮ ಸಂಶೋಧನಾ ಲೇಖನಗಳನ್ನು ಮಂಡಿಸಲು ಅವಕಾಶ ನೀಡಲಾಗುವುದು, ಆಯ್ಕೆಯಾದ ಲೇಖನಗಳಿಗೆ ನಗದು ಬಹುಮಾನವೂ ಇರಲಿದೆ. ಸಮ್ಮೇಳನದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧಕರು, ಪ್ರಾಧ್ಯಾಪಕರು, ಶೈಕ್ಷಣಿಕ ತಜ್ಞರು ಹಾಗೂ ಯುವ ಉದ್ಯಮಿಗಳು ಭಾಗವಹಿಸಬಹುದಾಗಿದೆ. ಆಸಕ್ತರು ಮೇ 6ರೊಳಗಾಗಿ https://forms.gle/nphLXewAESvuPP5Y8 ಈ ಗೂಗಲ್ ಫಾರ್ಮ್ ಮೂಲಕ ನೋಂದಣಿ ಮಾಡಬಹುದಾಗಿದ್ದು, ಹೆಚ್ಚಿನ ಮಾಹಿತಿಗೆ https://kstacademy.in ವೆಬ್‌ಸೈಟ್ ಅಥವಾ ಮೊಬೈಲ್ ಸಂಖ್ಯೆಗಳು: 9845258894, 9743084194, 9686449019 ಸಂಪರ್ಕಿಸಬಹುದು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಬೇಸಿಗೆ ರಜೆ



ಶುರುವಾಯಿತು ಪುಟ್ಟನಿಗೆ ಬೇಸಿಗೆ ರಜೆ
ಸುಮ್ಮನೆ ಮನೆಯಲ್ಲಿ ಕೂರಲವನಿಗೆ ಸಜೆ
ಹೊರಟಿತು ಸಂಜೆ ನಮ್ಮ ಪುಟ್ಟನ ಸವಾರಿ
ಪಕ್ಕದ ಮಾವಿನ ತೋಪಿನ ಕಡೆಗೆ ಈ ಬಾರಿ!

ಮಾವಿನ ಮರದಲ್ಲಿ ಕಾಯಿಯ ಕಾಣಲು
ಆಹಾ! ನೀರೂರಿತು ಪುಟ್ಟನ ಬಾಯಿಯಲ್ಲಿ
ಮಾವಿನ ಕಾಯಿಯನ್ನು ತಿನ್ನುವ ಆಸೆಯಲಿ
ಹಂಚಿನ ತುಂಡಿನಿಂದ ಗುರಿಯಿಟ್ಟ
ರಭಸದಲಿ!

ಪುಟ್ಟನ ಗುರಿಗೆ ಮಾವಿನಕಾಯಿ ಬೀಳಲು
ಆತನ ಮನವಾಯಿತು ಖುಷಿಯ ಹೊನಲು
ಆಸೆಯಿಂದ ಕಾಯಿಯನ್ನು ಹೆಕ್ಕಿ ತಿನ್ನಲು
ಪುಟ್ಟನ ಸ್ವರ್ಗಕ್ಕಿತ್ತು ಮೂರೇ ಮೂರು
ಗೇಣು!

ವಸಂತಋತು ಮಕ್ಕಳಿಗೆ ನೀಡಿದೆ ವರದಾನ
ಮರ ಗಿಡಗಳಾಗಿವೆ ಹೂ ಹಣ್ಣುಗಳ
ಉದ್ಯಾನ
ಬೇಸಿಗೆ ರಜೆಯಲ್ಲಿ ಮಕ್ಕಳು ಮಾಡಲಿ
ತಿರುಗಾಟ
ಕಾಯಿ ಹಣ್ಣು ತಂದು ಮಾಡಲಿ ಹಿತವಾದ
ಊಟ!

– ಪ್ರಜ್ಞಾ ರವೀಶ್ ಕುಳಮರ್ವ
ಕಾಸರಗೋಡು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

20–04–2025 – ಭಾನುವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಾಷಾಢ |
| ಯೋಗ | : ಸಿದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:03:17 |
| ಸೂರ್ಯಾಸ್ತ | : 18:48:37 |
| ರಾಹು ಕಾಲ | : 17:13–18:49 |
| ಯಮಘಂಡ ಕಾಲ | : 12:26–14:02 |
| ಗುಳಿಕ ಕಾಲ | : 15:37–17:13 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 19–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.53 ಅಡಿ |
| ಒಳ ಹರಿವು | 424 ಕ್ಯುಸೆಕ್ |
| ಹೊರ ಹರಿವು | 430 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.024 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.70 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 112 ಕ್ಯುಸೆಕ್ |
| ಸಾಮರ್ಥ್ಯ | 3.873 ಟಿಎಂಸಿ |

# ಹೀಗೊಂದು ಪತ್ರ... ನನ್ನ ಪ್ರೀತಿಯ ಪ್ರಿಯತಮ

ನನ್ನ ಪ್ರೀತಿಯ ಪ್ರಿಯತಮ..

ನನ್ನ ಈ ಒಕ್ಕಣೆಯನ್ನು ನೋಡಿ ಆಶ್ಚರ್ಯವಾಯಿತು ಅಲ್ಲವೇ! ಮನದಲ್ಲಿ ನೂರೆಂಟು ಗೊಂದಲಗಳು, ತಲೆಯಲ್ಲಿ ಇಲ್ಲದ ಕೋಲಾಹಲ, ಎದೆ ಬಡಿತ ತಪ್ಪಿದ ಹಾಗೆ ಅನುಭವ ಆಗುತ್ತಿದೆ ಅಲ್ಲವೇ?

ಎಂದೂ ಇಲ್ಲದ ಹೊಸ ರೀತಿಯ ಒಂದು ಒಕ್ಕಣೆ ನಿನ್ನ ಮನಸ್ಸಿನಲ್ಲಿ ಮೊದಮೊದಲು ಗಾಬರಿ, ಭಯ ದಿಗಿಲುಗಳನ್ನು ಮೂಡಿಸಿದರೆ ನಂತರದಲ್ಲಿ ನನ್ನ ಕುರಿತು ರೇಜಿಗೆ, ಅಸಹ್ಯ ಉಂಟಾಗಬಹುದು. ಅಯ್ಯೋ, ನಾನು ಇವರನ್ನು ದೇವರಂತೆ ಭಾವಿಸುತ್ತಿದ್ದೆ. ನನಗೆ ಬುದ್ಧಿ ಹೇಳುವ ನನ್ನ ಬದುಕನ್ನು ಸರಿದಾರಿಗೆ ತರುವ ದೇವತೆಯ ಸ್ಥಾನ ನೀಡಿ ಮನದಲ್ಲಿ ಆರಾಧಿಸುತ್ತಿದ್ದೆ

ಛೀ ! ಈಕೆ ಇಂತಹ ಹೆಣ್ಣು ಮಗಳು ಎಂದು ಭಾವಿಸಿರಲಿಲ್ಲ ಎಂಬೆಲ್ಲಾ ಯೋಚನೆಗಳು ಮನವನ್ನು ಮುತ್ತಿ ದಾಳಿ ಮಾಡುತ್ತಿವೆ ಅಲ್ಲವೇ? ಅವೆಲ್ಲವನ್ನು ಪಕ್ಕಕ್ಕಿಟ್ಟು ಒಂದು ಕ್ಷಣ ಪತ್ರವನ್ನು ಮುಂದೆ ಓದು.


ನಾವಿಬ್ಬರೂ ಒಂದೇ ಶಾಲೆಯ ಒಂದೇ ತರಗತಿಯಲ್ಲಿ ಓದದೆ ಇದ್ದರೂ, ಕೆಲ ತಿಂಗಳುಗಳ ವ್ಯತ್ಯಾಸವಿದ್ದರೂ ಒಂದೇ ವಯಸ್ಸಿನವರಂತೂ ಹೌದು. ಸ್ನೇಹಿತರಲ್ಲಿ ಬುದ್ಧಿವಾದ ರುಚಿಸುವುದಿಲ್ಲ! ನೀನೇನು ನನಗೆ ಹೇಳುವುದು ಎಂಬ ಭಾವ ಒಂದು ರೀತಿಯ ಅಸಹನೆಯ ರೂಪದಲ್ಲಿ ಹೊರಬರುತ್ತದೆ. ಸಿಟ್ಟಿನ ಸಮಯದಲ್ಲಿ "ದೊಡ್ಡದಾಗಿ ಬಂದ್ಲು ಹೇಳಿ ಬಿಡೋಕೆ" ಎಂಬ ಮಾತುಗಳು ಬಾಯಿಂದ ಬರದೇ ಇದ್ದರೂ ಮನದ ಮೂಲೆಯಲ್ಲಿ ಆ ರೀತಿಯ ಅಗೋಚರ ಭಾವ ತೋಚಬಹುದು.

ಆದ್ದರಿಂದ ನಾನೇ ಮುಂದಾಗಿ ನಿನಗಿಂತ ಕೆಲ ದಿನಗಳು ದೊಡ್ಡವಳಾಗಿರುವ ಕಾರಣ ನನ್ನನ್ನು ನಾನೇ ಅಕ್ಕ ಎಂದು ಭಾವಿಸಿಕೊಂಡು ನನ್ನ ತಮ್ಮನೆಂದು ನಿನ್ನನ್ನು ಭಾವಿಸಿ ಕಿವಿ ಹಿಂಡಿ ಮಾತನಾಡುವ ಸ್ವಾತಂತ್ರ್ಯವನ್ನು ನನಗೆ ನಾನೇ ಕೊಟ್ಟುಕೊಂಡಿದ್ದೇನೆ.

ಕೇವಲ ಒಂದು ಒತ್ತು ಕೊಡದೆ ಇದ್ದರೆ ಒಂದು ಇಡೀ ಪದವೇ ತನ್ನ ಅರ್ಥವನ್ನು ಕಳೆದುಕೊಂಡು ಹೊಸದೊಂದು ಅರ್ಥವನ್ನು ಸ್ಫುರಿಸಿ.... ಹೊಸ ಹೊಸ ಅರ್ಥಗಳಿಗೆ ಎಡೆ ಮಾಡಿಕೊಡುತ್ತದೆ ಎಂಬುದನ್ನು ನನ್ನ ಪತ್ರದ ಒಕ್ಕಣೆಯನ್ನು ಓದಿ ನಿನಗೆ ಅರಿವಾಗಿರ ಬಹುದು. ಪ್ರಿಯ ತಮ್ಮ ಎಂದು ಬರೆಯುವ ಬದಲು ಪ್ರಿಯತಮ ಎಂದು ಬರೆದು ಎರಡು ಪದಗಳ ನಡುವಿನ ಅಂತರವನ್ನು ಕಲ್ಪಿಸದೆ ಹೋದ ಕಾರಣ ಉಂಟಾದ ಗೊಂದಲದ ಅರಿವು ನಿನಗೀಗ ಆಗಿರಬಹುದು.

ಅವಸರದಲ್ಲಿ (ಬೇಕೆಂದೇ ಮಾಡಿದ್ದರೂ ಕೂಡ)ಯೇ ಮಾಡಿದ್ದರೂ ಈ ಪದಗಳಿಗೆ ನಾವು ತೆರಬೇಕಾದ ಬೆಲೆ ಅಪಾರ ಅಲ್ವೇ?

ಕೇವಲ ಒಂದು ಪದ ಈ ರೀತಿಯ ವ್ಯತ್ಯಾಸವನ್ನು ಸೃಷ್ಟಿಸಬಲ್ಲುದಾದರೆ ನಮ್ಮ ಜೀವನದಲ್ಲಿ ನಡೆಯುವ ಯಾವುದೋ ಒಂದು ಕ್ಷಣಿಕ ಘಟನೆ ನಮ್ಮ ಬದುಕಿನ ಮೇಲೆ ಬೀರುವ ಪ್ರಭಾವ ಇನ್ನೆಷ್ಟು ಎಂಬುದನ್ನು ಈಗಲಾದರೂ ಯೋಚಿಸು. ಕೇವಲ ನಿನ್ನ ದಿಕ್ಕಿನಲ್ಲಿ ಮಾತ್ರ ಯೋಚಿಸಿದರೆ ಸಾಲದು. ನಿನ್ನ ಎದುರಿಗೆ ಇರುವವರ, ನೀನು ಆಪಾದಿಸುವವರ ಶೂಸಿನಲ್ಲಿ ಕಾಲಿಟ್ಟು ಯೋಚಿಸು. ವೈಜ್ಞಾನಿಕ ಪರಿಭಾಷೆಯಲ್ಲಿ 360 ಡಿಗ್ರಿ ಆಂಗಲ್ ಎಂದು ಕರೆಯುವ ಈ ಯೋಚನಾ ಕ್ರಮ ಎಲ್ಲರಿಗೂ ಸಿದ್ಧಿಸುವುದಿಲ್ಲ ನಿಜ.... ಆದರೆ ಖಂಡಿತವಾಗಿಯೂ ದೈನಂದಿನ ಬದುಕಿನಲ್ಲಿ ಈ ರೀತಿಯ ಯೋಚನಾ ಕ್ರಮವನ್ನು ನೀನು ರೂಢಿಸಿಕೊಂಡಾಗ ಬೇರೆಯವರನ್ನು ಜಡ್ಜ್ ಮಾಡದೆ ಇರಲು ಸಾಧ್ಯವಾಗುತ್ತದೆ.



**ಬೆಚ್ಚನಾ ಮನೆ ಇರಲು ವೆಚ್ಚಕ್ಕೆ ಹೊನ್ನಿರಲು**
**ಇಚ್ಛೆಯನರಿತು ನಡೆಯುವ ಸತಿ ಇರಲು**
**ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ**

ನಿನಗೆ ಬೆಚ್ಚನೆ ಇರಲು ಮನೆ ಇದೆ ವೆಚ್ಚಕ್ಕೆ ಹೊನ್ನಿದೆ, ಹಣವಿದೆ. ಇಲ್ಲಿಯವರೆಗೂ ನಿನ್ನ ಇಚ್ಛೆಯಂತೆ ನಿನಗಾಗಿ ಬಾಯಿ ಮುಚ್ಚಿಕೊಂಡು ತನ್ನೆಲ್ಲ ನೋವು ಸಂಕಟಗಳನ್ನು ಬಚ್ಚಿಟ್ಟು ನಿನಗಾಗಿ, ನಿನ್ನ ಆರೋಗ್ಯಕ್ಕಾಗಿ ಹೆದರಿ ನಡೆದ ಸತಿ ಇದ್ದಾಳೆ, ಚಿಕ್ಕ ಮಕ್ಕಳಿದ್ದಾರೆ .... ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ ಎಂದೆನ್ನಲು ಏನೂ ಅಡ್ಡಿಯಿರಲಿಲ್ಲ... ಅಲ್ಲವೇ?

ಬದುಕಿನ ವಿಪರ್ಯಾಸ ಎಂದರೆ ಇದೇ.....ಎಲ್ಲವೂ ಇದ್ದು ಏನೂ ಇಲ್ಲದಂತೆ ಭಾಸವಾಗುವುದು. ಎಲ್ಲವನ್ನು ಹೊಂದಿರುವ ನಿನ್ನ ಮನಸ್ಸು ಎಲ್ಲರೂ ನಿನ್ನ ತಾಳಕ್ಕೆ ತಕ್ಕಂತೆ ಕುಣಿಯುವ ನೀನು ಹೇಳಿದಂತೆ ಕೇಳುವ ಕೀಲು ಗೊಂಬೆಗಳಂತೆ ವರ್ತಿಸುವ ರೀತಿ ಬದಲಾಗಬೇಕೆಂದು ನೀನು ಬಯಸಿದೆ ಅಲ್ಲವೇ?

ನೀನು ವಿಜ್ಞಾನದ ವಿದ್ಯಾರ್ಥಿ.... ವಿರುದ್ಧ ಧ್ರುವಗಳು ಪರಸ್ಪರ ಒಂದನ್ನೊಂದು ಆಕರ್ಷಿಸುತ್ತವೆ ಎಂಬುದನ್ನು ನೀನು ಮರೆತಿರುವೆ. ನಿನ್ನ ಮತ್ತು ನಿನ್ನ ಪತ್ನಿಯ ವೈರುಧ್ಯಗಳ ನಡುವೆ ನಿಮ್ಮ ಬದುಕು ಆಕರ್ಷಕವಾಗಿರಬೇಕಿತ್ತು ಅಲ್ವೇ? ನೀವಿಬ್ಬರೂ ಒಂದೇ ತಾಯಿಯ ಮಕ್ಕಳಲ್ಲ.... ನಿಜ ಹೇಳಬೇಕೆಂದರೆ ಒಂದೇ ತಾಯಿಯ ಮಕ್ಕಳಲ್ಲಿಯೂ ಸಾಕಷ್ಟು ವೈರುಧ್ಯಗಳಿರುತ್ತವೆ ಅಂತಹದ್ದರಲ್ಲಿ ವಿಭಿನ್ನ ಪರಿಸರದಲ್ಲಿ, ವಿಭಿನ್ನ ಹಿನ್ನೆಲೆಯಲ್ಲಿ ಹುಟ್ಟಿದ, ಬಾಲ್ಯವನ್ನು ಕಳೆದ, ಬೆಳೆದ ನಿಮ್ಮಿಬ್ಬರ ನಡುವಿನ ಆಕರ್ಷಣೆ ಪ್ರೀತಿಯಾಗಿ, ಪ್ರೀತಿ ಒಬ್ಬರನ್ನೊಬ್ಬರು ಬಾಳ ಸಂಗಾತಿಯಾಗಿ ಪಡೆಯಲೇಬೇಕು ಎಂಬ ಹಂಬಲವಾಗಿ ಆ ಹಂಬಲ ಹಠವಾಗಿ ಒಬ್ಬರನ್ನೊಬ್ಬರು ಪಡೆದುಕೊಂಡಾಗ ಅದು ತನ್ನ ಮೊದಲಿನ ಎಲ್ಲಾ ಆಕರ್ಷಣೆಗಳನ್ನು ಕಳೆದುಕೊಳ್ಳಲು ಕಾರಣ ಏನು ಎಂದು ಯೋಚಿಸಿದ್ದೀಯ?



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ನಿನ್ನ ಭಾವನೆಗಳನ್ನು, ಯೋಚನೆಗಳನ್ನು, ವಿಚಾರಗಳನ್ನು ಆಕೆ ಒಪ್ಪಿಕೊಳ್ಳಲೇಬೇಕೆಂಬ ನಿನ್ನ ಹಟದಲ್ಲಿ ಶತಾಯಗತಾಯ ನಿನ್ನನ್ನು ಸಮಾಧಾನವಾಗಿರಿಸುವ ನಿಟ್ಟಿನಲ್ಲಿ ಆಕೆ ತನ್ನನ್ನು ತಾನೇ ಕಳೆದು ಕೊಂಡಿದ್ದಾಳೆ. ಬಹುಶಹ ಕವಿಯಾಗಿದ್ದರೆ ಹೇಳುತ್ತಿದ್ದಳೇನೋ , ನೀನು ಇಚ್ಚಿಸಿದಂತೆಯೇ ಉಡುಗೆ, ತೊಡುಗೆ, ನಿನಗೆ ಬೇಕಾದ ಅಡುಗೆ, ನಿನ್ನದೇ ನೋಟ ನಿನ್ನದೇ ಪರಿಪಾಠಗಳಲ್ಲಿ ಮುಳುಗಿ ಹೋಗಿರುವ ನಾನು ಈಗೀಗ ಕನ್ನಡಿಯಲ್ಲಿ ನೋಡಿಕೊಂಡರೆ ನನ್ನ ಮುಖದ ಬದಲು ನಿನ್ನ ಮುಖವೇ ಕಾಣುತ್ತಿದೆ ಎಂದು.

ಹಂಗಿಸುತ್ತಿದ್ದೇನೆ ಎಂದು ಭಾವಿಸಬೇಡ ತಮ್ಮಾ.... ಈ ಭೂಮಿಗೆ ಬರುವಾಗ ನಾವು ಒಬ್ಬರೇ ಬಂದಿರುತ್ತೇವೆ ಹೋಗುವಾಗಲೂ ಕೂಡ ಒಬ್ಬರೇ. ನಡುವೆ ಕಳೆಯುವ ಹಲ ಕೆಲ ವರುಷಗಳು ಋಣಾನುಬಂಧದ ರೂಪದಲ್ಲಿ, ದಾಂಪತ್ಯದ ರೂಪದಲ್ಲಿ ನೀವಿಬ್ಬರು ಸತಿಪತಿಯಾಗಿದ್ದೀರಿ ಲೋಕದ ನಿಯಮವೇ ಹಾಗೆ ಅಲ್ಲವೇ?. ಇಲ್ಲಿ ನೀವಿಬ್ಬರೂ ಪ್ರತಿಸ್ಪರ್ಧಿಗಳಲ್ಲ. ಅಂದಮೇಲೆ ಸೋಲು ಗೆಲುವಿನ ಪ್ರಶ್ನೆಯೇ ಇಲ್ಲ.

ನೀವಿಬ್ಬರು ಒಬ್ಬರಿಗೊಬ್ಬರು ಪೂರಕವಾಗಿ ಬದುಕಿನ ಈ ಆಟದಲ್ಲಿ ಒಂದು ತಂಡವಾಗಿ ಆಡಬೇಕು.

ತಪ್ಪುಮಾಡಿಬಿಟ್ಟೆ ನೀನು....ನಿನ್ನ ಬದುಕಿನ ಅತ್ಯಮೂಲ್ಯ ಸಮಯವನ್ನು ಪತ್ನಿ, ಮಕ್ಕಳೊಂದಿಗೆ ಕಳೆಯುವ ಹಲವಾರು ಸುಖದ ನೆನಪುಗಳನ್ನು ಹುಟ್ಟು ಹಾಕುವ ಗಳಿಗೆಗಳನ್ನು ನಿನ್ನ ಕೈಯಾರೆ ನೀನೇ ಕಳೆದುಕೊಂಡಿರುವೆ ಇದರಲ್ಲಿ ನಿನ್ನ ಪತ್ನಿಯ ಪಾಲೂ ಇದೆ ಎಂದರೆ ನಿಮ್ಮಿಬ್ಬರಿಗೂ ಬೇಸರವಾಗಬಹುದು, ಆದರೆ ಹೇಳದೆ ವಿಧಿ ಇಲ್ಲ.

ಕೈಯಲ್ಲಿ ಸುತ್ತಿಗೆಯನ್ನು ಹಿಡಿದಿರುವ ವ್ಯಕ್ತಿಯ ಕಣ್ಣಿಗೆ ಎಲ್ಲವೂ ಮೊಳೆಯಂತೆ ಗೋಚರವಾಗುತ್ತದೆ ಎಂಬ ಗಾದೆಯಂತೆ ನಿನ್ನ ಕಣ್ಣಿಗೆ ಹೆಂಡತಿ, ಮಕ್ಕಳು ಅವರು ಮಾಡುವ ಪ್ರತಿಯೊಂದು ಕೆಲಸಗಳು ಅವರ ಮಾತುಕತೆ ಆಹಾರ ವಿಹಾರ ಪದ್ಧತಿಗಳು ಎಲ್ಲವೂ ತಪ್ಪು ಎಂದು ಕಂಡರೆ ಅವರಾದರೂ ಏನು ಮಾಡಿಯಾರು? ತಪ್ಪನ್ನು ತಪ್ಪೆಂದು ಗುರುತಿಸಲು ಕೇವಲ ನೀನು ಹೇಳಿದರೆ ಮಾತ್ರ ಸಾಲದು ಅಥವಾ ಅದನ್ನು ಯಾರು ಬೇಕಾದರೂ ಹೇಳಬಹುದು ಆದರೆ ಎಂದಾದರೂ ಆ ತಪ್ಪನ್ನು ನೀನು ಕೂಡ ಸೇರಿದಂತೆ ಎಲ್ಲರನ್ನೂ ಒಳಗೊಂಡು ಸರಿಪಡಿಸುವ ಪ್ರಯತ್ನವನ್ನು ಎಂದಾದರೂ ನೀನು ಮಾಡಿರುವೆಯಾ? ಯೋಚಿಸು.

ಮಕ್ಕಳಿಗೆ ಇಂಥದ್ದೇ ಅಡುಗೆ ಬೇಕೆಂದಿಲ್ಲ, ಆದರೆ ಕುಟುಂಬದ ಎಲ್ಲರೂ ಒಟ್ಟಾಗಿ ಕುಳಿತು, ನಗುನಗುತ್ತಾ ಮಾತನಾಡುತ್ತಾ ಉಂಡು, ತಿಂದು, ಆಡಿ ನಲಿದರೆ ಬಡತನದಲ್ಲೂ ನೆಮ್ಮದಿ, ಸಂತೃಪ್ತಿ ತಾಂಡವವಾಡುತ್ತದೆ ಎಂದು ನೀವೇಕೇ ಅರಿಯಲಿಲ್ಲ. ನಿಮ್ಮದೇ ಮನೆಯಲ್ಲಿ ಮನಗಳ ನಡುವೆ ಗೋಡೆಯನ್ನು ಕಟ್ಟಿಕೊಂಡು ಬದುಕಿನ ಸುಂದರ ಕ್ಷಣಗಳನ್ನು ನಿಮ್ಮ ಕೈಯಾರೆ ಹಾಳು ಮಾಡಿಕೊಂಡಿರಲ್ಲವೇ?

ಇದೀಗ ಎಲ್ಲವನ್ನು ಒತ್ತಟ್ಟಿಗಿರಿಸಿ ನಿಮ್ಮಿಬ್ಬರ ಬದುಕನ್ನು ನಿಮಗಾಗಿ, ನಿಮ್ಮ ಮಕ್ಕಳಿಗಾಗಿ, ಅವರ ಏಳ್ಗೆಗಾಗಿ ನೀವು ಕಾರ್ಯ ನಿರ್ವಹಿಸಬೇಕಾಗಿದೆ.

ಜೀವನದಲ್ಲಿ ಬಹಳಷ್ಟು ಮುಂದೆ ಬಂದಿದ್ದೇವೆ... ಇನ್ನು ಹಿಂದಿರುಗಿ ಮೊದಲಿನಂತೆ ಎಲ್ಲವನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ ಎಂಬ ಭಯ ಬೇಡ.

ನಾವು ಶೂನ್ಯದಿಂದ ಮುಂದೆ ಬಂದಿದ್ದೇವೆ ಮತ್ತೆ ಶೂನ್ಯಕ್ಕೆ ಹೋದರೂ ಕೂಡ ಖಂಡಿತವಾಗಿಯೂ ಮುಂದೆ ಬರುವ ಸಾಧ್ಯತೆಗಳಿವೆ. ಕಡಿವಾಣವನ್ನು ಹಾಕುವುದೇ ಆದರೆ ನಿನ್ನ ಅತಿಯಾದ ಆಲೋಚನೆಗಳಿಗೆ, ಮಾನಸಿಕ ತಳಮಳಗಳಿಗೆ ಹಾಕು. ಪೂರ್ಣ ವಿರಾಮ ಇಡುವುದಾದರೆ ನಿನ್ನ ವಿನಾಕಾರಣದ ಶಂಕೆ, ಅನುಮಾನ ಗಳಿಗೆ ಇಡು.

ನಿಮ್ಮಿಬ್ಬರ ನೆಮ್ಮದಿಯಲ್ಲಿ ನಿಮ್ಮ ಕುಟುಂಬದ ಒಳಿತಿದೆ ಮತ್ತೆ ಎಲ್ಲವನ್ನು ಮೊದಲಿನಿಂದ ಆರಂಭಿಸಿದಾಗ ನೂರೆಂಟು ಕಿರಿಕಿರಿಗಳು, ಅವಮಾನಗಳು, ಮೇಲರಿಮೆ ಕೀಳರಿಮೆ ಅಹಮಿಕೆಗಳು ನಿಮ್ಮಿಬ್ಬರ ನಡುವೆ ತಡೆಗೋಡೆಯಾಗುವುದು ಬೇಡ. ಇಬ್ಬರಲ್ಲಿ ಒಬ್ಬರ ಬದುಕು ಸಾವಿನಲ್ಲಿ ಅಂತ್ಯವಾಗುವವರೆಗೆ ಜೊತೆಯಾಗಿರುವ ಈ ದಾಂಪತ್ಯವೆಂಬ ಬಂಧನದಲ್ಲಿ ನೀವಿಬ್ಬರು ಸಂತಸಾರೋಗ್ಯದಿಂದ ಇರಿ ಎಂದು ಹಾರೈಸುವ

**ನಿನ್ನ ಪ್ರೀತಿಯ ಅಕ್ಕ**

# ಅಗ್ನಿ ಅವಘಡ ತಡೆಗಟ್ಟುವಿಕೆಗೆ ಅರಿವು ಅಗತ್ಯ

## ಅಗ್ನಿಶಾಮಕಧಿಕಾರಿ ಕೆ.ತಿಮ್ಮಾರೆಡ್ಡಿ ಹೇಳಿಕೆ | ಜಿಲ್ಲಾಸ್ಪತ್ರೆಯಲ್ಲಿ ಅಗ್ನಿ ಶಾಮಕ ದಳದಿಂದ ಅಣಕು ಪ್ರದರ್ಶನ



■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ವತಿಯಿಂದ ಶನಿವಾರ ಅಗ್ನಿ ಅವಘಡ ತಡೆಗಟ್ಟುವಿಕೆಯಲ್ಲಿ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಜಾಗೃತಿ ಮೂಡಿಸುವ ಕುರಿತು ಅಣಕು ಪ್ರದರ್ಶನ ನಡೆಯಿತು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಕೆ.ತಿಮ್ಮಾರೆಡ್ಡಿ ಅವರು ಮಾತನಾಡಿ, ಸಾರ್ವಜನಿಕರು ತಮ್ಮ ಸುತ್ತ–ಮುತ್ತ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದಲ್ಲಿ ಅದರ ತಡೆಗಟ್ಟುವಿಕೆ ಕುರಿತು ಅರಿವು ಹೊಂದಬೇಕು ಎಂದು ಹೇಳಿದರು. ಆಸ್ಪತ್ರೆಗಳು ಅತ್ಯಂತ ಸೂಕ್ಷ್ಮ ಸ್ಥಳಗಳು. ಆರೋಗ್ಯ ಸಿಬ್ಬಂದಿಗಳು



ಜಾಗರೂಕತೆ ಹೊಂದಿರಬೇಕು. ಬೆಂಕಿ ನಂದಿಸುವ ಸಾಧನಗಳು ಸುವ್ಯವಸ್ಥೆಯಲ್ಲಿ ಇಟ್ಟುಕೊಳ್ಳಬೇಕು. ಅಗ್ನಿಶಾಮಕ ದಳದವರು 24 ಗಂಟೆಯೂ ಸೇವೆ ನೀಡುತ್ತಾರೆ. ಅಗ್ನಿ ದುರಂತ, ತುರ್ತು ಸೇವೆಗಳಿಗಾಗಿ ಸದಾ ಸನ್ನದ್ಧರಾಗಿರುತ್ತಾರೆ ಎಂದು ತಿಳಿಸಿದರು.

ಇದೇ ವೇಳೆ ಬೆಂಕಿ ನಂದಿಸುವ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹನುಮನಗೌಡ ಪೊಲೀಸ್ ಪಾಟೀಲ್ ಅವರು ಮಾತನಾಡಿ, ಪ್ರತಿ ವರ್ಷ ಏಪ್ರಿಲ್ 14 ರಿಂದ 20 ರ ವರೆಗೆ ದೇಶದಾದ್ಯಂತ ಅಗ್ನಿಶಾಮಕ ಸೇವಾ ಸಪ್ತಾಹವನ್ನು ಆಚರಿಸಿ ಸಾರ್ವಜನಿಕರಿಗೆ ಅಗ್ನಿ ಸುರಕ್ಷತೆ ಕುರಿತು ತಿಳುವಳಿಕೆ ನೀಡಿ ಅಣಕು ಪ್ರದರ್ಶನ ನಡೆಸಲಾಗುತ್ತದೆ ಎಂದು ಹೇಳಿದರು.

ಬಳಿಕ ಅಗ್ನಿಶಾಮಕ ಅಧಿಕಾರಿಗಳ ತಂಡ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರ ನೇತೃತ್ವದಲ್ಲಿ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಗಳ ತಂಡ ರಚಿಸಿ, ಕುತೂಹಲಕಾರಿಯಾಗಿ ಅಣಕು ಪ್ರದರ್ಶನ ನಡೆಸಲಾಯಿತು.

ಅಣಕು ಪ್ರದರ್ಶನದಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದಲ್ಲಿ ಬಳಸಬಹುದಾದ ಬೆಂಕಿ ನಂದಿಸುವ ಸಾಧನಗಳು, ಅಗ್ನಿ ಸಂಭವಿಸಿದ ಸ್ಥಳದಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳಿಸುವುದು, ಪ್ರಥಮ ಚಿಕಿತ್ಸೆ ಹಾಗೂ ಇತರೆ ಕ್ರಮಗಳ ಕುರಿತು ಪರಿಪೂರ್ಣ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ.ಗುರುನಾಥ ಬಿ.ಚೌವ್ಹಾಣ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪರಿವೀಕ್ಷಕ ಪರಮೇಶ್ವರ್, ಅಗ್ನಿಶಾಮಕ ಠಾಣಾಧಿಕಾರಿ ದಯಾನಂದ ಗೌಡ, ಜಿಲ್ಲಾ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ಗುಮಾಸ್ತೆ ದೇಸಾಯಿ, ಶುಶ್ರುಷಣಾ ಅಧೀಕ್ಷಕಿ ವಿಮಲಾಕ್ಷಿ ಸೇರಿದಂತೆ ಜಿಲ್ಲಾ ಆಸ್ಪತ್ರೆಯ ತಜ್ಞ ವೈದ್ಯರು, ವೈದ್ಯಾಧಿಕಾರಿಗಳು, ಶುಶ್ರುಷಕರು, ಅಧೀನ ಸಿಬ್ಬಂದಿ ಮತ್ತು ಸಾರ್ವಜನಿಕರು ಹಾಜರಿದ್ದರು.

# ಬಿಎಸ್ಎನ್ಎಲ್ ಗ್ರಾಹಕರ ಸೇವಾ ಶಿಬಿರ

■ **ಹಂಪಿ ಟೈಮ್ಸ್ ಬಳ್ಳಾರಿ**

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ಬಳ್ಳಾರಿಯ ಪ್ರಧಾನ ವ್ಯವಸ್ಥಾಪಕರ ಕಚೇರಿ ವತಿಯಿಂದ ಗ್ರಾಹಕರ ವಿವಿಧ ಟೆಲಿಕಾಂ ಗ್ರಾಹಕ ಸೇವಾ ಸಮಸ್ಯೆಗಳನ್ನು ಬಗೆಹರಿಸಲು ಏ.21, ಏ.24 ಮತ್ತು ಏ.29 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಬಳ್ಳಾರಿ ಕಚೇರಿ ಮತ್ತು ಹೊಸಪೇಟೆಯ ಕೆಕೆಆರ್‌ಟಿಸಿ ಬಸ್ ನಿಲ್ದಾಣ ಎದುರುಗಡೆಯ ಕಚೇರಿಯಲ್ಲಿ 'ಗ್ರಾಹಕರ ಸೇವಾ ಶಿಬಿರ'ಗಳನ್ನು ಆಯೋಜಿಸಲಾಗುತ್ತಿದೆ.

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್‌ವು ಸಾರ್ವಜನಿಕರ ದೂರಸಂಪರ್ಕ ಸೇವಾ ಪೂರೈಕೆದಾರರಿಗಾಗಿ ಏಪ್ರೀಲ್ ಮಾಹೆಯನ್ನು 'ಕನ್ನೆಕ್ಟಿಂಗ್ ವಿಥ್ ಕೇರ್' ಎಂಬ ಥೀಮ್ ನೊಂದಿಗೆ ಗ್ರಾಹಕ ಸೇವಾ ಮಾಸವನ್ನಾಗಿ ಆಚರಿಸುತ್ತಿದೆ. ಗ್ರಾಹಕರು ತಮ್ಮ ಸೇವೆಗಳಲ್ಲಿ ಶ್ರೇಷ್ಠತೆ ತರಲು ಬಿಎಸ್‌ಎನ್‌ಎಲ್ ಕ್ಯಾಂಪ್ ಕಚೇರಿ ಮತ್ತು ಡಿಜಿಟಲ್ ದೂರು–ಟ್ರ್ಯಾಕಿಂಗ್ ಪೋರ್ಟಲ್ http://cfp.bsnl.co.in ಮೂಲಕ ತಮ್ಮ ಪ್ರತಿಕ್ರಿಯೆ ನೀಡಬಹುದು. ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ ಬಳ್ಳಾರಿಯ ಉಪಪ್ರಧಾನ ವ್ಯವಸ್ಥಾಪಕ ಡಿ.ಶ್ರೀಧರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.21 ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2ನ ಫೀಡರ್ ಆದ ಎಫ್–36 ರ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಏ.21 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಬಂಡಿಹಟ್ಟಿ, ಆಶ್ರಯ ಕಾಲೋನಿ, ಈದ್ಗ ರೋಡ್, ಟೀಚರ್ಸ್ ಕಾಲೋನಿ, ಜಾಗೃತಿ ನಗರ ಸರ್ಕಲ್, ಆಜಾದ್ ನಗರ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಮೀನುಗಾರಿಕೆ ಇಲಾಖೆ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆ ವತಿಯಿಂದ 2024–25 ನೇ ಸಾಲಿನ ಮತ್ತು ಹಿಂದಿನ ಸಾಲಿನಲ್ಲಿ ಅನುಷ್ಠಾನವಾಗದೇ ಬಾಕಿ ಉಳಿದ ಗುರಿಗಳಿಗೆ ಫಲಾನುಭವಿ ಆಧಾರಿತ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯ ವಿವಿಧ ಘಟಕಗಳಿಗೆ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಹೊಸ ಸಿಹಿನೀರಿನ ಫಿನ್‌ಫಿಶ್ ಮೊಟ್ಟೆ ಕೇಂದ್ರಗಳ ಸ್ಥಾಪನೆ, ಲವಣಯುಕ್ತ/ಕ್ಷಾರೀಯ ಪ್ರದೇಶಗಳಿಗೆ ಹೊಸ ಕೊಳದ ನಿರ್ಮಾಣ, ಹೊಸ ಬೆಳೆಯುವ ಕೊಳ, ಲವಣಯುಕ್ತ, ಸೌಮ್ಯ, ಕ್ಷಾರೀಯಕ್ಕಾಗಿ ಬಯೋಫ್ಲಾಕ್ ಕೊಳಗಳ ನಿರ್ಮಾಣ ಮತ್ತು ದಿನಕ್ಕೆ 2 ಟನ್ ಉತ್ಪಾದನಾ ಸಾಮರ್ಥ್ಯದ ಮಿನಿ ಫೀಡ್ ಗಿರಣಿಗಳು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.60ರಷ್ಟು ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.40 ರಂತೆ ಸಹಾಯಧನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಮೇ 03 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು ಸಂಬಂಧಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೂ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪ ನಿರ್ದೇಶಕರ ಕಚೇರಿ– ಮೊ.9449593156, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಬಳ್ಳಾರಿ–ಮೊ.7406508971 ಮತ್ತು ಸಂಡೂರು ಮೊ.7204911897 ಗೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







